# ಜಿಲ್ಲಾ ಪಂಚಾಯತ್, ಹಾಸನ.

ಸಂಖ್ಯೆ: ಜಿಪಂಹಾ/ಪ.ಶಾ/31/2011-12

ದಿನಾಂಕ: 16-09-2011

## ಸಭಾಹ್ವಾನ ಪತ್ರ

ಶ್ರೀ ಬಿ.ಡಿ.ಚಂದ್ರೇಗೌಡ , ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 21-09-2011ರಂದು ಬುಧವಾರ ಅಪರಾಹ್ನ:03-00ಗಂಟೆಗೆ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯನ್ನು ಹಾಸನ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕರೆಯಲಾಗಿದೆ. ಸದರಿ ಸಭೆಗೆ ಮಾನ್ಯ ಸದಸ್ಯರುಗಳು ಹಾಜರಾಗಿ ಸಲಹೆ ಸಹಕಾರ ನೀಡಲು ಕೋರಲಾಗಿದೆ.

ಯೋಜನಾ ನಿರ್ದೇಶಕರು,
ಡಿ.ಆರ್.ಡಿ.ಎ ಕೋಶ, ಹಾಗೂ ಸದಸ್ಯ ಕಾರ್ಯದರ್ಶಿ
ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ.

ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:

1. ರಾಜ್ಯಮಟ್ಟದ ಕಬ್ಬಡಿ ಪಂದ್ಯಾವಳಿ ನಡೆಸಲು ಧನ ಸಹಾಯ ಕೋರಿ ಮನವಿ..
2. ಅಂತರಾಷ್ಟ್ರೀಯ ಕ್ರೀಡೆಯಲ್ಲಿ ಭಾಗವಹಿಸಲು ಧನ ಸಹಾಯ ಕೋರಿ ಮನವಿ
3. ಮೈಸೂರು ದಸರದಲ್ಲಿ ವಸ್ತುಪ್ರದರ್ಶನ ಮತ್ತು ಸ್ತಬ್ದ ಚಿತ್ರ ಸಿದ್ದಪಡಿಸಿ 2011ರಲ್ಲಿ ಜಿಲ್ಲಾ ಪಂಚಾಯಿತಿಗಳು ಭಾಗವಹಿಸುವ ಕುರಿತು.
4. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಪ್ರತಿ ತಾಲ್ಲೂಕು ಹಾಗೂ ಗ್ರಾಮಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ಶಾಲಾ ಮಕ್ಕಳಿಗಾಗಿ ನಡೆಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.
5. 2011-12ನೇ ಸಾಲಿನ ಏಪ್ರಿಲ್-2011 ರಿಂದ ಜೂನ್-2011ರವರೆಗಿನ ಮಾಸಿಕ ಹಾಗೂ 2010-11ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಅನುಮೋದನೆ ಪಡೆಯುವ ಬಗ್ಗೆ
6. 2011-12ನೇ ಸಾಲಿನ ಜೂನ್-2011 ರಿಂದ ಈವರೆಗೆ ಬಂದ ಆರ್ಥಿಕ ಇಲಾಖೆ/ಗ್ರಾಮೀಣ ಅಭಿವೃದ್ಧಿ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಅನುದಾನ ಜಿಲ್ಲಾ ಪಂಚಾಯತ್‌ಗೆ ಬಿಡುಗಡೆಯಾಗಿರುವುದನ್ನು ಅನುಮೋದನೆ ಪಡೆಯುವ ಬಗ್ಗೆ.
7. ದಿನಾಂಕ:30-03-2011ಕ್ಕೆ ಅಂತ್ಯಗೊಳ್ಳುವ ಸಿ.ಅಂಡ್ ಎ.ಜಿ. ವರದಿಯಲ್ಲಿ ಸೇರಿಸಲು ಉದ್ದೇಶಿಸಿರುವ ಕರಡು **ಟಿಪ್ಪಣಿ** ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಛೇರಿಗೆ ಸಂಬಂಧಿಸಿದಂತೆ ಮಹಾಲೇಖಪಾಲರ ಆಡಿಟ್ ವರದಿಯ 2007ರಿಂದ 2010ರಲ್ಲಿನ ಸೆಕ್ಷನ್-ಎ ಕಂಡಿಕೆ 1-ಎ,ಬಿ,ಸಿ ಗಳಿಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಹಾಸನ ಇವರು ಸಲ್ಲಿಸಿರುವ ಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆಗೆ ಮಂಡಿಸುವ ಬಗ್ಗೆ.

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

ಪ್ರತಿಯನ್ನು:

1. ಶ್ರೀ ಬಿ.ಡಿ.ಚಂದ್ರೇಗೌಡ, ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
2. ಶ್ರೀ ಲಕ್ಷ್ಮಣಗೌಡ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
3. ಶ್ರೀಮತಿ ಭಾಗ್ಯ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
4. ಶ್ರೀ ಪುರುಷೋತ್ತಮ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
5. ಶ್ರೀಮತಿ ಸಿ.ಎನ್.ರತ್ನಮ್ಮ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
6. ಶ್ರೀಮತಿ ಡಿ.ಜಿ.ಅಂಬಿಕಾ ರಾಮಣ್ಣ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
7. ಶ್ರೀ ಎನ್.ಡಿ.ಕಿಶೋರ್, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
9. ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
10. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
11. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನರವರ ಆಪ್ತಶಾಖೆಗೆ
12. ಉಪ ಕಾರ್ಯದರ್ಶಿ(ಆಡಳಿತ), ಜಿಲಾ ಪಂಚಾಯಿತಿ, ಹಾಸನ.
13. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
16. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯ್ಪಟ್ಟಣ
17. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
18. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಳುಹಿಸುತ್ತಾ, ಪೂರ್ಣ ಮಾಹಿತಿಯೊಂದಿಗೆ ಇಲಾಖಾ ಮುಖ್ಯಸ್ಥರು ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ.
19. ಉಪನಿರ್ದೇಶಕರು, ಮೂಲಭೂತ ಸೌಕರ್ಯಗಳ ಇಲಾಖೆ (ಭೂಸೇನಾ ನಿಗಮ), ಹಾಸನ.
20. ಕಛೇರಿ ಪ್ರತಿ.

# ದಿನಾಂಕ: 21-09-2011ರಂದು ಅಪರಾಹ್ನ: 03-00ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

**ಅಧ್ಯಕ್ಷತೆ: ಶ್ರೀ ಬಿ.ಡಿ.ಚಂದ್ರೇಗೌಡ,**

**ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ**

**ಹಾಜರಿ:06** **ಗೈರು ಹಾಜರಿ: 01**

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td colspan="4">ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಇವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು.</td></tr>
<tr><td>1</td><td>ಏಪ್ರಿಲ್, ಮೇ ಮತ್ತು ಜೂನ್ - 2011ರ ವರೆಗಿನ ಮಾಹೆಯ ಮಾಸಿಕಲೆಕ್ಕಅನು ಮೋದನೆಗೆ</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ ಸಂಕಲನ/ ಮಾಸಿಕ ಲೆಕ್ಕ-1/2010-11/2011-12 ದಿನಾಂಕ: 19-09-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಪ್ರಸ್ತಾಪಿಸುತ್ತಾ, ಜಿಲ್ಲಾ ಪಂಚಾಯಿತಿ ಹಾಸನದ ಏಪ್ರಿಲ್, ಮೇ ಮತ್ತು ಜೂನ್ 2011ರವರೆಗಿನ ಮಾಹೆಯ ಜಮಾ ಮತ್ತು ಖರ್ಚಿನ ತ:ಖ್ತೆಗಳು ಚಲನ್ ಮತ್ತು ಓಚರ್ ಗಳು ಸ್ವೀಕೃತವಾಗಿರುತ್ತದೆ. ಖಜಾನೆಯಿಂದ ಸ್ವೀಕೃತವಾದ ಒಟ್ಟು ಜಮೆ ಮತ್ತು ಖರ್ಚಿನ ವಿವರಗಳನ್ನು ಪ್ರಧಾನ ಲೆಕ್ಕ ಶೀರ್ಷಿಕೆವಾರು ಸಂಕಲನ ಗಣಕೀಕರಣದಲ್ಲಿ ತಯಾರಿಸಲಾಗಿದೆ. ಸದರಿ ಸಂಕಲನದ ತ:ಖ್ತೆಯ ವಿವರ ರಾಜಸ್ವ ಜಮೆ ವೆಚ್ಚ ಮತ್ತು ಜಮಾ ಶೀರ್ಷಿಕೆಗಳ ಲೆಕ್ಕ, ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರ ಕೆಳಗಿನಂತಿದೆ. ಏಪ್ರಿಲ್, ಮೇ ಮತ್ತು ಜೂನ್ 2011ರವರೆಗಿನ ಮಾಸಿಕ ಲೆಕ್ಕ ವಿವರ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಅನುಮೋದನೆ ನೀಡಲು ಮಂಡಿಸಿದೆ.<br>
<table>
<tr><th>ತಿಂಗಳು</th><th>ಜಮೆ</th><th>ಖರ್ಚು</th></tr>
<tr><td>ಏಪ್ರಿಲ್ -2011</td><td>357543904</td><td>40384943</td></tr>
<tr><td>ಮೇ-2011</td><td>77851597</td><td>101721524</td></tr>
<tr><td>ಜೂನ್-2011</td><td>125426196</td><td>130478312</td></tr>
</table></td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಕೋರಿರುವಂತೆ ಜಿಲ್ಲಾ ಪಂಚಾಯಿತಿ ಹಾಸನದ ಏಪ್ರಿಲ್, ಮೇ ಮತ್ತು ಜೂನ್ 2011ರ ಮಾಹೆ ವರೆಗಿನ ಜಮಾ ಮತ್ತು ಖರ್ಚಿನ ತ:ಖ್ತೆ ರಾಜಸ್ವ ಜಮೆ ವೆಚ್ಚಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br>
<table>
<tr><th>ತಿಂಗಳು</th><th>ಜಮೆ</th><th>ಖರ್ಚು</th></tr>
<tr><td>ಏಪ್ರಿಲ್ - 2011</td><td>357543904</td><td>40384943</td></tr>
<tr><td>ಮೇ-2011</td><td>77851597</td><td>101721524</td></tr>
<tr><td>ಜೂನ್-2011</td><td>125426196</td><td>130478312</td></tr>
</table></td></tr>
</table>

| | | | |
|---|---|---|---|
| | | ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಗೆ ವಿವಿಧ ಇಲಾಖೆಗಳಿಗೆ ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆ ಮಾಡುವ ಅನುದಾನವನ್ನು ವಿನಿಯೋಗಿಸಿರುವ ಬಗ್ಗೆ ವೋಚರ್ ಗಳನ್ನು ಸಭೆಗೆ ಸಲ್ಲಿಸಿದಲ್ಲಿ ಪರಿಶೀಲಿಸಲು ಅನುಕೂಲವಾಗುತ್ತದೆ. ಆದ್ದರಿಂದ, ಮುಂದಿನ ಸಭೆಗೆ 5 ಇಲಾಖೆಗಳ ಜಮಾ ಖರ್ಚಿಗೆ ಸಂಬಂಧಿಸಿದಂತೆ, ವೋಚರ್ ಗಳನ್ನು ಮಂಡಿಸುವ ಬಗ್ಗೆ ಕ್ರಮ ವಹಿಸುವಂತೆ ಮುಖ್ಯ ಲೆಕ್ಕಾಧಿಕಾರಿಯವರಿಗೆ ತಿಳಿಸಿದರು<br>ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣಗೌಡರವರು ಮಾತನಾಡುತ್ತಾ, ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾಗುವ ಶಾಲಾ ಕೊಠಡಿಗಳ ಬಗ್ಗೆ ಜಿಲ್ಲಾ ಪಂಚಾಯಿತಿ ಸದಸ್ಯರ ಗಮನಕ್ಕೆ ತರಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಪುರುಷೋತ್ತಮರವರು ಮಾತನಾಡುತ್ತಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಸಿಗಳ ವಿತರಣೆಗೆ ಸಂಬಂಧಿಸಿದಂತೆ, ಕಾರ್ಯ ನಿರ್ವಾಹಕ ಅಧಿಕಾರಿಯವರು ಕ್ರಿಯಾಯೋಜನೆಯನ್ನು ಸಾಮಾಜಿಕ ಅರಣ್ಯ ಇಲಾಖೆಗೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ ಸಾಮಾಜಿಕ ಅರಣ್ಯ ಇಲಾಖೆಯ ವತಿಯಿಂದ ಆಲೂರು ತಾಲ್ಲೂಕಿನಲ್ಲಿ 11 ಗ್ರಾಮ ಪಂಚಾಯಿತಿಗಳಿಗೆ ಸಸಿಗಳನ್ನು ವಿತರಿಸಿರುವುದಿಲ್ಲ. ವಲಯ ಅರಣ್ಯಾಧಿಕಾರಿಯವರು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br>ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಮಾತನಾಡುತ್ತಾ, ತಾಲ್ಲೂಕುವಾರು ಸಭೆಗಳನ್ನು ನಡೆಸಿ ಸಸಿಗಳನ್ನು ನಿಗದಿತ ಅವಧಿಯೊಳಗೆ ವಿತರಣೆ ಮಾಡುವಂತೆ ವಲಯ ಅರಣ್ಯಾಧಿಕಾರಿಯವರಿಗೆ ಸೂಚಿಸ ಲಾಗಿದೆ ಎಂದು ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀ ಎನ್.ಡಿ.ಕಿಶೋರ್ ರವರು ಮಾತನಾಡುತ್ತಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲಾ ಕೊಠಡಿಗಳು ಬಹಳ ಶಿಥಿಲಗೊಂಡಿದ್ದು, ಅಂತಹ ಶಾಲೆಗಳನ್ನು ಕೆಡವಲು ಉಪ ನಿರ್ದೇಶಕರ ಕಛೇರಿಗೆ ಈಗಾಗಲೇ ಶಾಲೆಗಳ ಪಟ್ಟಿಯನ್ನು ನೀಡಲಾಗಿದ್ದರೂ ಸಹ ಇಲ್ಲಿಯವರೆಗೆ ಶಾಲೆಗಳನ್ನು ಕೆಡವಲು ಯಾವುದೇ ಕ್ರಮ ವಹಿಸಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ಸ್ಥಾಯಿ ಸಮಿತಿಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದು ಶಿಥಿಲ ಗೊಂಡಿರುವ ಶಾಲಾ ಕಟ್ಟಡಗಳನ್ನು ಕೆಡವಲು ಕ್ರಮ ವಹಿಸಬೇಕೆಂದು ಕೋರಿದರು. | ಮಾನ್ಯ ಅಧ್ಯಕ್ಷರು ತಿಳಿಸಿರುವಂತೆ ವಿವಿಧ ಇಲಾಖೆಗಳಿಗೆ ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆ ಮಾಡುವ ಅನುದಾನವನ್ನು ವಿನಿಯೋಗಿಸಿರುವ ಬಗ್ಗೆ ವೋಚರ್ ಗಳನ್ನು ಸಭೆಗೆ ಸಲ್ಲಿಸಲು ಕ್ರಮ ವಹಿಸುವಂತೆ ಮುಖ್ಯ ಲೆಕ್ಕಾಧಿಕಾರಿಯವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಿತು. |

| | | | |
|---|---|---|---|
| 2 | ಅಂತರಾಷ್ಟ್ರೀಯ ಕ್ರೀಡೆಯಲ್ಲಿ ಭಾಗವಹಿಸಲು ಧನ ಸಹಾಯ ಕೋರಿ ಮನವಿ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)/ವಂತಿಕೆ-40 /2011-12 ದಿನಾಂಕ: 28-06-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ದಿನಾಂಕ: 15-07-2011ರಿಂದ 17-07-2011ರವರೆಗೆ ಜರ್ಮನ್ ದೇಶದ ರೇನು ಬಾನ್ ನಲ್ಲಿ ನಡೆಯುವ ಬೀಚ್ ವಾಲಿಬಾಲ್ ಕ್ರೀಡೆಯಲ್ಲಿ ಭಾಗವಹಿಸಲು ಆರ್ಥಿಕ ತೊಂದರೆಯಿರುವುದರಿಂದ, ಜಿಲ್ಲಾ ಪಂಚಾಯಿತಿಯಿಂದ ಧನಸಹಾಯ ನೀಡುವಂತೆ ಕೋರಿ ಶ್ರೀ ಅಂತೋಣಪ್ಪ ಎಸ್ ಬಿನ್ ಲೇಟ್: ಶಾಂತಪ್ಪ ಸಿ , ಹಾಸನ ಇವರು ಮನವಿ ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>ದಿನಾಂಕ: 15-07-2011ರಿಂದ 17-07-2011ರವರೆಗೆ ಜರ್ಮನ್ ದೇಶದ ರೇನು ಬಾನ್ ನಲ್ಲಿ ನಡೆಯುವ ಬೀಚ್ ವಾಲಿಬಾಲ್ ಕ್ರೀಡೆಯಲ್ಲಿ ಭಾಗವಹಿಸಲು ಕರ್ನಾಟಕದಿಂದ ಆಯ್ಕೆ ಯಾಗಿರುವ ಶ್ರೀ ಅಂತೋಣಪ್ಪ ಎಸ್ ಬಿನ್ ಲೇ ಶಾಂತಪ್ಪ ಸಿ, ಹಾಸನ ಇವರಿಗೆ ಜಿಲ್ಲಾ ಪಂಚಾಯಿತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿ ಲಾಯಿತು. |
| 3 | ಮೈಸೂರು ದಸರಾ ವಸ್ತುಪ್ರದರ್ಶನ -2011ರಲ್ಲಿ ಜಿಲ್ಲಾ ಪಂಚಾಯಿತಿಗಳು ಭಾವಹಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(1)26-ವಾಹನ/2011-12 ದಿನಾಂಕ: 08-08-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಅಂಗವಾಗಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ 2011-ರ ದಸರಾ ವಸ್ತುಪ್ರದರ್ಶನವನ್ನು ದೊಡ್ಡಕೆರೆ ಮೈದಾನದ ಆವರಣದಲ್ಲಿ ದಿನಾಂಕ: 28-09-2011ರಿಂದ 25-12-2011ರವರೆಗೆ ಒಟ್ಟು 89 ದಿನಗಳ ಅವಧಿಗೆ ಏರ್ಪಡಿಸಲಾಗಿದ್ದು,ಈ ವಸ್ತುಪ್ರದರ್ಶನದಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತಿಗಳು ಮಳಿಗೆಗಳನ್ನು ತೆರೆದು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಕ್ರಮ ವಹಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ವಸ್ತುಪ್ರಾಧಿಕಾರ, ಮೈಸೂರು ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ 2011-ರ ದಸರಾ ವಸ್ತುಪ್ರದರ್ಶನದಲ್ಲಿ ಹಾಸನ ಜಿಲ್ಲಾ ಪಂಚಾಯಿತಿ ವತಿಯಿಂದ ಮಳಿಗೆಯನ್ನು ತೆರೆದು ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನ ಗೊಳಿಸಲಾದ/ಅನುಷ್ಠಾನಗೊಳಿಸಲಾಗುವ ಕಾರ್ಯ ಕ್ರಮಗಳ ಮಾಹಿತಿಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸಲು ಹಾಗೂ ಈ ಸಂಬಂಧ ತಗಲುವ ವೆಚ್ಚವನ್ನು ಜಿಲ್ಲಾಪಂಚಾಯಿತಿಯಿಂದ ಭರಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಿತು. |

| | | | |
|---|---|---|---|
| | | ಅದರಂತೆ, ಮೈಸೂರು ದಸರಾ ವಸ್ತುಪ್ರದರ್ಶನ-2011ರಲ್ಲಿ ಹಾಸನ ಜಿಲ್ಲಾ ಪಂಚಾಯಿತಿ ವತಿಯಿಂದ ಮಳಿಗೆ ತೆರೆದು, ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನಗೊಳಿಸಲಾದ/ ಅನುಷ್ಠಾನಗೊಳಿಸಲಾಗುವ ಕಾರ್ಯಕ್ರಮಗಳ ಮಾಹಿತಿಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸುವ ಬಗ್ಗೆ ಹಾಗೂ ವೆಚ್ಚವನ್ನು ಜಿಲ್ಲಾ ಪಂಚಾಯಿತಿಯಿಂದ ಭರಿಸುವ ಬಗ್ಗೆ ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ. | |
| 4 | ಮೈಸೂರು ದಸರಾ–2011ರ ಜಂಬೂ ಸವಾರಿಯಲ್ಲಿ ಸ್ಥಬ್ದ ಚಿತ್ರವನ್ನು ಜಿಲ್ಲಾ ಪಂಚಾಯತ್‌ಗಳು ಪ್ರದರ್ಶಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(1)26–ವಾಹನ/2011–12 ದಿನಾಂಕ: 20–09–2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಜರುಗುವ ಜಂಬೂಸವಾರಿಯಲ್ಲಿ ದಿನಾಂಕ: 06–10–2011ರಂದು ಜಿಲ್ಲಾ ಪಂಚಾಯತ್ ವತಿಯಿಂದ ಸ್ಥಬ್ದಚಿತ್ರವನ್ನು ಸಿದ್ದಪಡಿಸಿ ಪ್ರದರ್ಶಿಸಲು ಮತ್ತು ದಿನಾಂಕ: 08–09–2011ರಿಂದ 25–12–2011ರವರೆಗೆ ನಡೆಯುವ ದಸರಾ ವಸ್ತು ಪ್ರದರ್ಶನದಲ್ಲಿ ವಿವಿಧ ಇಲಾಖೆಗಳು ಭಾಗವಹಿಸಲು ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು ಇವರು ಸೂಚಿಸಿರುತ್ತಾರೆ.<br>ಅದರಂತೆ, ಮೈಸೂರು ದಸರಾ 2011ರ ಜಂಬೂ ಸವಾರಿಯಲ್ಲಿ ದಿನಾಂಕ: 06–10–2011ರಂದು ಹಾಸನ ಜಿಲ್ಲಾ ಪಂಚಾಯತ್ ವತಿಯಿಂದ ಸ್ಥಬ್ದಚಿತ್ರ ಪ್ರದರ್ಶಿಸಲು ತಗಲುವ ವೆಚ್ಚ ರೂ.4.75ಕ್ಷಗಳನ್ನು ಮತ್ತು ವಸ್ತು ಪ್ರದರ್ಶನದಲ್ಲಿ ಮಳಿಗೆ ತೆರೆಯಲು ತಗಲುವ ವೆಚ್ಚ ರೂ.4.75ಲಕ್ಷಗಳು ಸೇರಿ ಒಟ್ಟು ರೂ.9.50ಲಕ್ಷಗಳನ್ನು ಜಿಲ್ಲಾ ಪಂಚಾಯಿತಿಯಿಂದ ಭರಿಸುವ ಬಗ್ಗೆ ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ವಿಶ್ವ ವಿಖ್ಯಾತ ಮೈಸೂರು ದಸರಾ 2011ರ ಜಂಬೂ ಸವಾರಿಯಲ್ಲಿ ದಿನಾಂಕ: 06–10–2011ರಂದು ಹಾಸನ ಜಿಲ್ಲಾ ಪಂಚಾಯತ್ ವತಿಯಿಂದ ಸ್ಥಬ್ದಚಿತ್ರ ಪ್ರದರ್ಶಿಸಲು ತಗಲುವ ವೆಚ್ಚ ರೂ.4.75ಲಕ್ಷಗಳು ಮತ್ತು ವಸ್ತು ಪ್ರದರ್ಶನದಲ್ಲಿ ಮಳಿಗೆಯನ್ನು ತೆರೆಯಲು ತಗಲುವ ವೆಚ್ಚ ರೂ.4.75ಲಕ್ಷಗಳು ಸೇರಿ ಒಟ್ಟು ರೂ.9.50ಲಕ್ಷ (ರೂಪಾಯಿ ಒಂಬತ್ತು ಲಕ್ಷದ ಐವತ್ತು ಸಾವಿರ ಮಾತ್ರ)ಗಳನ್ನು ಜಿಲ್ಲಾ ಪಂಚಾಯಿತಿಯಿಂದ ಭರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. |
| 5 | ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಪ್ರತೀ ತಾಲ್ಲೂಕು ಹಾಗೂ ಗ್ರಾಮಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ಶಾಲಾ ಮಕ್ಕಳಿಗಾಗಿ ನಡೆಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8) ವಂತಿಕೆ 96/2011-12 ದಿನಾಂಕ: 05-08-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಗಳಿಗೆ ಶಾಲಾ ಮಕ್ಕಳಿಗಾಗಿ ರಾಜ್ಯದ ಪ್ರತಿ ಜಿಲ್ಲೆಗಲ್ಲಿ ಪ್ರತೀ ತಾಲ್ಲೂಕು ಹಾಗೂ ಗ್ರಾಮಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ವ್ಯಾಪಕವಾಗಿ ಹೆಚ್ಚಿಸಲು ಅನುಕೂಲವಾಗುವಂತೆ ಹಾಗೂ ಚಳುವಳಿಯ ಉದ್ದೇಶಿತ ರಾಲಿಗಳು, ವಾರ್ಷಿಕ ಕಾರ್ಯ ಚಟುವಟಿಕೆಗಳು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಮವಸ್ತ್ರ ನೀಡುವ ಉದ್ದೇಶಕ್ಕಾಗಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು 2011-12ನೇ ಸಾಲಿಗೆ ತಮ್ಮ ಜಿಲ್ಲಾ ಪಂಚಾಯಿತಿಗಳ ಸ್ವಂತ ಸಂಪನ್ಮೂಲಗಳಿಂದ ರೂ.25000/-ಗಳನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 191,213(2)(111) ಮತ್ತು 219((1)(2)ರನ್ವಯ ಜಿಲ್ಲಾ ಪಂಚಾಯಿತಿ ವತಿಯಿಂದ ಕ್ರಮವಾಗಿ ಆಯಾ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗಳಿಗೆ ವಾರ್ಷಿಕ ವಂತಿಕೆಯನ್ನು ನೀಡುವಂತೆ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಸರ್ಕಾರದ ಸುತ್ತೋಲೆಯನ್ವಯ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಗಳಿಗೆ ಶಾಲಾ ಮಕ್ಕಳಿಗಾಗಿ ರಾಜ್ಯದ ಪ್ರತಿ ಜಿಲ್ಲೆಗಲ್ಲಿ ಪ್ರತೀ ತಾಲ್ಲೂಕು ಹಾಗೂ ಗ್ರಾಮಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ವ್ಯಾಪಕವಾಗಿ ಹೆಚ್ಚಿಸಲು ಅನುಕೂಲವಾಗುವಂತೆ ಹಾಗೂ ಚಳುವಳಿಯ ಉದ್ದೇಶಿತ ರಾಲಿಗಳು ವಾರ್ಷಿಕ ಕಾರ್ಯಚಟುವಟಿಕೆಗಳನ್ನು ಹಮ್ಮಿ ಕೊಳ್ಳಲು |

<table>
<tr><td></td><td></td><td></td><td>ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿ ಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಿತು.</td></tr>
<tr><td>6</td><td>ಜಿಲ್ಲಾ ಪಂಚಾಯತ್, ಹಾಸನಕ್ಕೆ 2ನೇ ತ್ರೈಮಾಸಿಕ ಅನುದಾನ 2011-12ನೇ ಸಾಲಿನದ್ದು ಹಾಗೂ ಕೇಂದ್ರ ಅನುದಾನ ಬಿಡುಗಡೆಯಾದ ಬಗ್ಗೆ.</td><td>ಸಂಖ್ಯೆ: ಜಿಪಂಹಾ/ಆರ್ಥಿಕ/ಆವ್ಯ/ಅಧೀ/1/4/ಹಕಾಸ್ಥಾ/ಟಿಪ್ಪಣಿ/2011-12 ದಿನಾಂಕ: 17-09-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ಸರ್ಕಾರದ ಆದೇಶದನ್ವಯ ಜಿಲ್ಲಾ ಪಂಚಾಯಿತಿ ಹಾಸನಕ್ಕೆ ಆರ್ಥಿಕ ಇಲಾಖೆಯಿಂದ ಲಿಂಕ್ ಡಾಕ್ಯುಮೆಂಟ್ ಅನುದಾನ/ ಇಲಾಖೆ ಅನುದಾನ/ ಕೇಂದ್ರ ಪುರಸ್ಕೃತ ಅನುದಾನಗಳು ಬಿಡುಗಡೆಯಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದರು.</td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br><br>ಸರ್ಕಾರದ ಆದೇಶದನ್ವಯ ಜಿಲ್ಲಾ ಪಂಚಾಯಿತಿ ಹಾಸನಕ್ಕೆ ಆರ್ಥಿಕ ಇಲಾಖೆಯಿಂದ ಲಿಂಕ್ ಡಾಕ್ಯುಮೆಂಟ್ ಅನುದಾನ/ ಇಲಾಖೆ ಅನುದಾನ/ ಕೇಂದ್ರ ಪುರಸ್ಕೃತ ಅನುದಾನಗಳು ಬಗ್ಗೆ ಸಭೆಯು ಅವಗಾಹಿಸಿತು.</td></tr>
<tr><td>7</td><td>2010-11ನೇ ಸಾಲಿನ ವಾರ್ಷಿಕ ಲೆಕ್ಕವನ್ನು ಹಣಕಾಸು, ಯೋಜನಾ ಮತ್ತು ಲೆಕ್ಕಪತ್ರ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸುವ ಬಗ್ಗೆ.</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ಸಂಕಲನ/ವಾರ್ಷಿಕ ಲೆಕ್ಕ/2011-12 ದಿನಾಂಕ: 19-09-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿ ಹಾಸನದ 2010-11ನೇ ಸಾಲಿನ ವಾರ್ಷಿಕ ಲೆಕ್ಕವನ್ನು ಹಣಕಾಸು, ಯೋಜನಾ ಮತ್ತು ಲೆಕ್ಕಪತ್ರ ಸ್ಥಾಯಿ ಸಮಿತಿಯ ಅನುಮೋದನೆ ನೀಡುವಂತೆ ಕೋರಿ ಜಮಾ ಮತ್ತು ಖರ್ಚು ತ:ಖ್ತೆಯನ್ನು ಸಭೆಗೆ ಮಂಡಿಸಿದರು.<br><br>ರೂ.ಗಳಲ್ಲಿ<br>ಜಮೆ: 1698513518<br>ಖರ್ಚು: 1428033460</td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br><br>ಜಿಲ್ಲಾ ಪಂಚಾಯಿತಿ ಹಾಸನದ 2010-11ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br><br>ರೂ.ಗಳಲ್ಲಿ<br>ಜಮೆ: 1698513518<br>ಖರ್ಚು: 1428033460</td></tr>
</table>

| | | | |
|---|---|---|---|
| 8 | ದಿನಾಂಕ: 30-03-2011ಕ್ಕೆ ಅಂತ್ಯಗೊಳ್ಳುವ ಸಿ.ಅಂಡ್ ಎ.ಜಿ ವರದಿಯಲ್ಲಿ ಸೇರಿಸಲು ಉದ್ದೇಶಿಸಿರುವ ಕರಡು ಟಿಪ್ಪಣಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಛೇರಿಗೆ ಸಂಬಂಧಿಸಿದಂತೆ, ಮಹಾ ಲೇಖಪಾಲರ ಆಡಿಟ್ ವರದಿಯ 2007ರಿಮದ 2010ರಲ್ಲಿನ ಸೆಕ್ಷನ್-ಎ ಕಂಡಿಕೆ 1-ಎ,ಬಿ,ಸಿ ಗಳಿಗೆ ಜಿಲ್ಲಾ ಸಮಾಜಕಲ್ಯಾಣಾಧಿಕಾರಿಗಳು ಹಾಸನ ಇವರು ಸಲ್ಲಿಸಿರುವ ಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆಗೆ ಮಂಡಿಸುವ ಬಗ್ಗೆ. | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರ ಪತ್ರ ಸಂಖ್ಯೆ: ಜಿಸಕಅ/ಡಿ5/ಆಡಿಟ್/ಸಿ.ಆರ್/11-12 ದಿನಾಂಕ: 17-06-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ದಿನಾಂಕ: 30-03-2011ಕ್ಕೆ ಅಂತ್ಯಗೊಳ್ಳುವ ಸಿ.ಅಂಡ್ ಎ.ಜಿ ವರದಿಯಲ್ಲಿ ಸೇರಿಸಲು ಉದ್ದೇಶಿಸಿರುವ ಕರಡು ಟಿಪ್ಪಣಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಛೇರಿಗೆ ಸಂಬಂಧಿಸಿದಂತೆ, ಮಹಾಲೇಖಪಾಲರ ಆಡಿಟ್ ವರದಿಯ 2007ರಿಂದ 2010ರಲ್ಲಿನ ಸೆಕ್ಷನ್ -ಎ ಕಂಡಿಕೆ 1-ಎ,ಬಿ,ಸಿ ಗಳಿಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಹಾಸನ ಇವರು ಸಲ್ಲಿಸಿರುವ ಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದು, ಹಣಕಾಸು, ಲೆಕ್ಕಪತ್ರ ಮತ್ತು ಯೋಜನಾ ಸ್ಥಾಯಿ ಸಮಿತಿಯ ಅನುಮೋದನೆ ನೀಡಬೇಕೆಂದು ಕೋರಿದರು.<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಬೇಲೂರು ತಾಲ್ಲೂಕು ಬಂಟೇನಹಳ್ಳಿ ಮತ್ತು ಹಳೇಬೀಡಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಿರ್ಮಾಣ ಮಾಡುತ್ತಿರುವ ಕಟ್ಟಡ ಕಾಮಗಾರಿಗಳು ಅಪೂರ್ಣಗೊಂಡಿದ್ದು, ಸಂಬಂಧಪಟ್ಟ ಗುತ್ತಿಗೆದಾರರಿಂದ ಹಣವನ್ನು ವಸೂಲು ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಛೇರಿಗೆ ಸಂಬಂಧಿಸಿದಂತೆ, ಮಹಾಲೇಖ ಪಾಲರ ಆಡಿಟ್ ವರದಿಯ 2007ರಿಂದ 2010ರಲ್ಲಿನ ಸೆಕ್ಷನ್-ಎ ಕಂಡಿಕೆ 1-ಎ,ಬಿ,ಸಿ ಗಳಿಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಹಾಸನ ಇವರು ಸಲ್ಲಿಸಿರುವ ಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು. |
| 9 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| 1 | ರಾಜ್ಯ ಮಟ್ಟದ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಗೆ ಧನ ಸಹಾಯ ನೀಡುವ ಬಗ್ಗೆ. | ಅಧ್ಯಕ್ಷರು, ಹೊಯ್ಸಳ ಬ್ಯಾಸ್ಕೆಟ್ ಬಾಲ್ ಕ್ಲಬ್, ಹಾಸನ ಇವರು ಮಾನ್ಯ ಅಧ್ಯಕ್ಷರು ಜಿಲ್ಲಾ ಪಂಚಾಯಿತಿ, ಹಾಸನ ಇವರಿಗೆ ಮನವಿಯನ್ನು ಸಲ್ಲಿಸಿ ದಿನಾಂಕ: 14-10-2011 ರಿಂದ 16-10-2011ರವರೆಗೆ ರಾಜ್ಯ ಮಟ್ಟದ ಆಹ್ವಾನಿತ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯನ್ನು ಹಾಸನ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲು ಉದ್ದೇಶಿಸಿದ್ದು, ಸದರಿ ಪಂದ್ಯಾವಳಿಗೆ ಜಿಲ್ಲಾ ಪಂಚಾಯಿತಿಯಿಂದ ಸಹಾಯಧನವನ್ನು ನೀಡುವಂತೆ ಕೋರಿರುತ್ತಾರೆ.<br>ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರು ಅಗತ್ಯ ವಂತಿಕೆಯನ್ನು ಬಿಡುಗಡೆ ಮಾಡುವಂತೆ ತಿಳಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಹೊಯ್ಸಳ ಬ್ಯಾಸ್ಕೆಟ್ ಬಾಲ್ ಕ್ಲಬ್, ಹಾಸನ ಇವರು ಕೋರಿರುವಂತೆ ದಿನಾಂಕ: 14-10-2011 ರಿಂದ 16-10-2011ರವರೆಗೆ ಹಾಸನ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ರಾಜ್ಯ |

| | | | |
|---|---|---|---|
| | | | ಮಟ್ಟದ ಆಹ್ವಾನಿತ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯ ವನ್ನು ನೀಡಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು. |
| 2 | ಪದವಿ ಪೂರ್ವ ಕಾಲೇಜು ಗಳ ಜಿಲ್ಲಾ ಮಟ್ಟದ ಕ್ರೀಡಾ ಕೂಟಕ್ಕೆ ಧನ ಸಹಾಯ ಕೋರಿ | ಪ್ರಾಂಶುಪಾಲರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಹಾಸನ ಇವರು ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರಿಗೆ ಮನವಿಯನ್ನು ಸಲ್ಲಿಸಿ ದಿನಾಂಕ: 05-09-2011 ಮತ್ತು 06-09-2011ರಂದು ಪದವಿಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟಗಳು ನಡೆದಿದ್ದು, ಸದರಿ ಕ್ರೀಡಾಕೂಟಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ಧನಸಹಾಯವನ್ನು ನೀಡುವಂತೆ ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಪ್ರಾಂಶುಪಾಲರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಹಾಸನ ಇವರು ಕೋರಿರುವಂತೆ ದಿನಾಂಕ: 05-09-2011 ಮತ್ತು 06-09-2011ರಂದು ನಡೆದಿರುವ ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.5,000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯ ವನ್ನು ನೀಡಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು. |
| | | | |
| | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | | |

(ಬಿ.ಡಿ.ಚಂದ್ರೇಗೌಡ) 12/10

ಅಧ್ಯಕ್ಷರು,

ಜಿಲ್ಲಾ ಪಂಚಾಯಿತಿ, ಹಾಸನ.